ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.ಃ 193/2020

ಪಿ. ಡಬ್ಲ್ಯುಃ 01

ಸಿ. ಡಬ್ಲ್ಯುಃ 01

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರವಿ |
| ತಂದೆ/ಪತಿಯ ಹೆಸರು | ಃ | ಚಾಮುಂಡೇಗೌಡ |
| ವಯಸ್ಸು | ಃ | 47 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಬೆಳಗೊಳ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

21.12.2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ದಿಃ 07.02.2020 ರಂದು ನನ್ನ ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ. ಸದರಿ ಜಗಳ ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ನಡೆದಿರುತ್ತದೆ. ಬೆಳಗೊಳದಲ್ಲಿರುವ ನಮ್ಮ ಜಮೀನಿನ ಹತ್ತಿರ ಆ ದಿನ ತಹಶೀಲ್ದಾರ್ ರವರು ಮಹಜರ್ ಮಾಡುವ ಕಾರಣ ಬಂದಿದ್ದರು. ತಹಶೀಲ್ದಾರ್ ರವರು ನಮ್ಮ ಜಮೀನನ್ನು ಸರ್ವೆ ಮಾಡಿಸುತ್ತೇವೆ ಎಂದು ಹೇಳಿ ಹೋದರು. ನಂತರ ಅವರು ಹೋದ ಮೇಲೆ ನಾನು ಮತ್ತು ನನ್ನ ಅಣ್ಣ ರಾಜು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೇವು.

ನಾವು ಕೆಲಸ ಮಾಡುತ್ತಿದ್ದಾಗ ನಮ್ಮ ಪಕ್ಕದ ಜಮೀನಿನ ತಮ್ಮಣ್ಣ, ನವೀನ್ , ಪವನ್, ಸ್ವಾಮಿ ಹಾಗೂ ನವೀನ್ ಕುಮಾರ್ ನ ಇಬ್ಬರು ಸ್ನೇಹಿತರು ನಮ್ಮ ಜಮೀನಿನ ಒಳಗೆ ಬಂದು ತಹಶೀಲ್ದಾರ್ ರವರು ಹೇಳಿದಂತೆ ನೀವು ಜಮೀನಿನಲ್ಲಿ ಕೆಲಸ ಮಾಡಬೇಡಿ ಎಂದು ಹೇಳಿ ತಮ್ಮಣ್ಣ, ನವೀನ್ , ಪವನ್, ಸ್ವಾಮಿ ರವರು ನಮ್ಮ ಮೇಲೆ ಹಲ್ಲೆ ಮಾಡಿದರು. ನವೀನ್ ಕುಮಾರ್ ನನಗೆ ದೊಣ್ಣೆಯಿಂದ ಬಲಗೈ ಗೆ ಹೊಡಿದಿರುತ್ತಾರೆ. ನನ್ನ ಅಣ್ಣ ರಾಜುಗೆ ತಮ್ಮಣ್ಣ, ನವೀನ್ , ಪವನ್, ಸ್ವಾಮಿ ರವರು ಗುದ್ದಲಿಯಿಂದ ಕೈಗೆ ಹೊಡೆದಿರುತ್ತಾರೆ. ನಂತರ ನನ್ನ ಅಣ್ಣ ರಾಜುನನ್ನು ಶ್ರೀರಂಗಪಟ್ಟಣದ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದು ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಗಲಾಟೆಯಲ್ಲಿ ನನ್ನ ಅಣ್ಣ ರಾಜುವಿನ ಕೈ ಮುರಿದಿರುತ್ತದೆ. ನನಗೆ ಗಲಾಟೆಯಲ್ಲಿ ಕೈ ಬೆರಳಿಗೆ ಏಟಾಗಿರುತ್ತದೆ. ಗಲಾಟೆ

ನಡೆದ ದಿನ ಸಂಜೆ 06.30 ಗಂಟೆ ಸಮಯಕ್ಕೆ ನಾನು ಕೆ.ಆರ್.ಎಸ್. ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

ಸಾಕ್ಷಿ ತಾನು ನೀಡಿದ್ದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಹಾಗೂ ಅದರಲ್ಲಿನ ತನ್ನ ಸಹಿಯನ್ನು ನಿಪಿ.1.ಎ. ಎಂದು ಗುರುತಿಸಲಾಯಿತು. ನಾನು ದೂರು ನೀಡಿದ ನಂತರ ಮಧ್ಯಾಹ್ನ 01.30 ಗಂಟೆ ಸಮಯದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ಪೋಲೀಸರು ಬಂದು ಸ್ಥಳ ಮಹಜರ್ ಮಾಡಿರುತ್ತಾರೆ. ಸದರಿ ಸಮಯದಲ್ಲಿ ಶಶಿಕುಮಾರ್ ಹಾಗೂ ಪ್ರಕಾಶ್ ಎನ್ನುವವರು ಸಹ ಇದ್ದರು. ಸದರಿ ಸಮಯದಲ್ಲಿ ಪೋಲೀಸರು ಸ್ಥಳದಿಂದ ದೊಣ್ಣೆ ಹಾಗೂ ಗುದ್ದಲಿಯನ್ನು ತೆಗೆದುಕೊಂಡು ಹೋದರು. ಸಾಕ್ಷಿಯು ಸ್ಥಳ ಮಹಜರ್ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಮಹಜರ್ ಅನ್ನು ನಿಪಿ.2 ಎಂದು ಹಾಗೂ ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.2.ಎ. ಎಂದು ಗುರುತಿಸಲಾಯಿತು.

ನನ್ನ ಮತ್ತು ನನ್ನ ಅಣ್ಣನ ಮೇಲೆ ಗಲಾಟೆ ಮಾಡಿ ಹಲ್ಲೆ ನಡೆಸಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಗಲಾಟೆ ಸಮಯದಲ್ಲಿ ಆರೋಪಿಯರು ಹೊಡೆಯಲು ಉಪಯೋಗಿಸಿದ್ದ ದೊಣ್ಣೆ ಮತ್ತು ಗುದ್ದಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ದೊಣ್ಣೆ ಮತ್ತು ಗುದ್ದಲಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾಲು.1 ಮತ್ತು 2 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಮಾನ್ಯ ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಕಾರಣಗಳಿಲ್ಲದಿಂದ ರಿಂದ ಪ್ರಾರ್ಥನೆಯನ್ನು ತಿರಸ್ಕರಿಸಿ ಪಾಟಿ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.